ಕರ್ನಾಟಕ ಸರ್ಕಾರ

*ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.*

ಸಂಖ್ಯೆ:ಪಪೂಶಿಇ/ ಶೈ.ಶಾ-04/ಸಾ.ಚ.ಸ್ಪ.ನ.ಕು-01/2014-15 ದಿನಾಂಕ: 7 .01.2015

## ಸುತ್ತೋಲೆ

ವಿಷಯ: 2014-15ನೇ ಶೈಕ್ಷಣಿಕ ಸಾಲಿನಲ್ಲಿ ಪದವಿ ಪೂರ್ವ ಶಿಕ್ಷಣದ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಪಠ್ಯೇತರ ಚಟುವಟಿಕೆಗಳ ಸ್ಪರ್ಧೆ ನಡೆಸುವ ಬಗ್ಗೆ.

****

ಕರ್ನಾಟಕ ರಾಜ್ಯ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಜಂಟಿ ಆಶ್ರಯದಲ್ಲಿ ಪ್ರಥಮ ಹಾಗೂ ದ್ವಿತೀಯ ಪಿಯುಸಿ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ. ಈ ಪಠ್ಯೇತರ ಚಟುವಟಿಕೆಗಳನ್ನು ಪ್ರಾರಂಭಿಸಿದ್ದರಿಂದ ಗ್ರಾಮಾಂತರ ಪ್ರದೇಶದಲ್ಲಿರುವ ಪ್ರತಿಭಾವಂತರನ್ನು ಗುರುತಿಸಲು ಸಾಧ್ಯವಾಗಿದೆ.

ಈ ಶೈಕ್ಷಣಿಕ ಸಾಲಿನಲ್ಲೂ ಸಹ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಹಿಂದಿನ ವರ್ಷಗಳಲ್ಲಿ ನಡೆಸಿದಂತೆ ಈ ಕೆಳಕಂಡ 11 ಸ್ಪರ್ಧೆಗಳನ್ನು ನಡೆಸಲು ತೀರ್ಮಾನಿಸಲಾಗಿದೆ.

ಸ್ಪರ್ಧೆಗಳ ವಿವರ:

1. ರಸಪ್ರಶ್ನೆ (ಸಾಮಾನ್ಯ ಜ್ಞಾನ).
2. ಪ್ರಬಂಧ ಸ್ಪರ್ಧೆ (ಇಂಗ್ಲೀಷ್ ಮಾಧ್ಯಮ)
3. ಪ್ರಬಂಧ ಸ್ಪರ್ಧೆ (ಕನ್ನಡ ಮಾಧ್ಯಮ)
4. ಚರ್ಚಾಸ್ಪರ್ಧೆ (ಕನ್ನಡ ಮಾಧ್ಯಮ)
5. ಚರ್ಚಾಸ್ಪರ್ಧೆ (ಇಂಗ್ಲೀಷ್ ಮಾಧ್ಯಮ)
6. ಏಕಪಾತ್ರಾಭಿನಯ.
7. ಭಾವಗೀತಾ ಗಾಯನ
8. ಜನಪದ ಗೀತಾ ಗಾಯನ.
9. ಚಿತ್ರಕಲೆ (ಫೈನ್ ಆರ್ಟ್ಸ್).
10. ವಿಜ್ಞಾನ ಉಪನ್ಯಾಸ: ಕನ್ನಡ ಮಾಧ್ಯಮ.
11. ವಿಜ್ಞಾನ ಉಪನ್ಯಾಸ: ಇಂಗ್ಲೀಷ್. ಮಾಧ್ಯಮ.

ಈ ಎಲ್ಲಾ ಸ್ಪರ್ಧೆಗಳನ್ನು ಎರಡು ಹಂತದಲ್ಲಿ ನಡೆಸಲಾಗುವುದು. ಮೊದಲು ಕಾಲೇಜುಮಟ್ಟದಲ್ಲಿ, ನಂತರ ಜಿಲ್ಲಾಮಟ್ಟದಲ್ಲಿ ನಡೆಸುವುದು. ಕಾಲೇಜುಮಟ್ಟದಲ್ಲಿ ಸ್ಪರ್ಧೆಗಳನ್ನು ನಡೆಸಿ, ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ವಿಜೇತರ ಹೆಸರನ್ನು ಸಿದ್ಧಪಡಿಸಿಕೊಂಡಿರಲು ಪ್ರಿನ್ಸಿಪಾಲರುಗಳಿಗೆ ದಾಖಲಾತಿ ಮತ್ತು ಇತರೆ ಚಟುಚಟಿಕೆಗಳ ಕೈಪಿಡಿ 2014-15 ರಲ್ಲಿ ಸೂಚಿಸಲಾಗಿತ್ತು. ಅದರಂತೆ ಕಾಲೇಜುಮಟ್ಟದ ಸ್ಪರ್ಧೆಗಳು ಈ ವೇಳೆಗೆ ಮುಗಿದಿರುತ್ತವೆ. ಪ್ರತಿ ಸ್ಪರ್ಧೆಯಲ್ಲಿ <u>**ಪ್ರಥಮ ಸ್ಥಾನಗಳಿಸಿದವರು**</u> ಜಿಲ್ಲಾಮಟ್ಟದ ಸ್ಪರ್ಧೆಗೆ ಅರ್ಹರಾಗುತ್ತಾರೆ. ಅವರ ಹೆಸರನ್ನು ಪ್ರಮಾಣೀಕರಿಸಿ ಗುರುತಿನ ಚೀಟಿಯೊಂದಿಗೆ ಜಿಲ್ಲಾಮಟ್ಟದ ಸ್ಪರ್ಧೆ ನಡೆಸಲು ಅನುಕೂಲವಾಗುವಂತೆ ನಿಮಗೆ ಕಳುಹಿಸಲು ನಿಮ್ಮ ಜಿಲ್ಲೆಯ ಪ್ರಿನ್ಸಿಪಾಲರುಗಳಿಗೆ ಸುತ್ತೋಲೆಯನ್ನು ನೀವು ಕಳುಹಿಸಲು ಕ್ರಮತೆಗೆದುಕೊಳ್ಳುವುದು.

**<u>ಜಿಲ್ಲಾಮಟ್ಟದ ಸ್ಪರ್ಧೆಗಳು:</u>**

ಜಿಲ್ಲಾಮಟ್ಟದ ಸ್ಪರ್ಧೆಗಳನ್ನು 31 ಶೈಕ್ಷಣಿಕ ಜಿಲ್ಲೆಗಳಲ್ಲಿ ನಡೆಸಲಾಗುವುದು.

ಜಿಲ್ಲಾಮಟ್ಟದ ಸ್ಪರ್ಧೆಗಳನ್ನು ಜಿಲ್ಲೆಗಳ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳು ತಮ್ಮ ಅಧ್ಯಕ್ಷತೆಯಲ್ಲಿ ಒಂದು ಪರಿಣಿತರ ಸಮಿತಿಯನ್ನು ರಚಿಸಿಕೊಂಡು ಪ್ರಿನ್ಸಿಪಾಲರ ಸಂಘ, ಉಪನ್ಯಾಸಕರ ಸಂಘ, ಖಾಸಗಿ ಕಾಲೇಜುಗಳ ಸಹಕಾರದೊಂದಿಗೆ ಜಿಲ್ಲಾ ಕೇಂದ್ರದಲ್ಲಿ ಅಥವಾ ಆ ಜಿಲ್ಲೆಯಲ್ಲಿ ಎಲ್ಲರಿಗೂ ಅನುಕೂಲವಾಗುವ ಸ್ಥಳದಲ್ಲಿ ನಡೆಸಬೇಕು. ಸ್ಪರ್ಧಿಗಳು ಮತ್ತು ಉಪನ್ಯಾಸಕರು ಜಿಲ್ಲಾಮಟ್ಟದ ಸ್ಪರ್ಧೆಗೆ ಭಾಗವಹಿಸಲು ಬಂದಾಗ ಪ್ರಯಾಣ ವೆಚ್ಚವನ್ನು ಸಂಬಂಧಪಟ್ಟ ಕಾಲೇಜಿನವರು ಕ್ರೀಡಾ ಮತ್ತು ವಾಚನಾಲಯದ ನಿಧಿಯಿಂದ ಭರಿಸಲು ತಿಳಿಸುವುದು. 11 ಸ್ಪರ್ಧೆಗಳು ರಸಪ್ರಶ್ನೆಯಲ್ಲಿ ಇನ್ನೊಬ್ಬ ವಿದ್ಯಾರ್ಥಿ ಇರುವುದರಿಂದ ಒಟ್ಟು 12 ಬಹುಮಾನಗಳನ್ನು ಜಿಲ್ಲಾಮಟ್ಟದ ಹಂತದಲ್ಲಿ ಈ ಕೆಳಕಂಡಂತೆ ನಗದು ರೂಪದಲ್ಲಿ ನೀಡಲು ಸೂಚಿಸಲಾಗಿದೆ.

| | | | |
|---|---|---|---|
| ಪ್ರಥಮ ಬಹುಮಾನ | ರೂ 500 * | 12= | ರೂ 6000/- |
| ದ್ವಿತೀಯ ಬಹುಮಾನ | ರೂ 400 * | 12= | ರೂ 4800/- |
| ತೃತೀಯ ಬಹುಮಾನ | ರೂ 300 * | 12= | ರೂ 3600/- |

ಪ್ರತಿ ಜಿಲ್ಲೆಗೆ ಬಹುಮಾನಕ್ಕಾಗಿ

| | |
|---|---|
| ಪ್ರಥಮ ಪಿಯುಸಿ | ರೂ 14,400/- |
| ದ್ವಿತೀಯ ಪಿಯುಸಿ | ರೂ 14,400/- |
| ಸಂಘಟನಾ ವೆಚ್ಚ , | ರೂ 5,000/- |
| ಒಟ್ಟು | ರೂ, 33,800/-. |

ಬಹುಮಾನ ವಿಜೇತರಿಗೆ ಹಣವನ್ನು ವಿತರಿಸಿ ಸ್ವೀಕೃತಿಯನ್ನು ಪಡೆದುಕೊಳ್ಳಬೇಕು ಈ ರೀತಿಯಲ್ಲಿ ಸಹಿ ಪಡೆದ ಮೂಲ ಪ್ರತಿಯನ್ನು ಸಂಘಟನಾ ವೆಚ್ಚದ ಮೂಲ ಬಿಲ್ಲನ್ನು ಜಿಲ್ಲೆಯಲ್ಲೇ ಕಾಯ್ದಿರಿಸಿಕೊಳ್ಳಬೇಕು.

**ಜಿಲ್ಲಾಮಟ್ಟದ ಸ್ಪರ್ಧೆಗೆ ವಿಷಯಗಳು:**

ಜಿಲ್ಲಾಮಟ್ಟದಲ್ಲಿ ನಡೆಯುವ ಪ್ರಬಂಧ ಹಾಗೂ ಚರ್ಚಾ ಸ್ಪರ್ಧೆಗಳು ಹಾಗೂ ವಿಜ್ಞಾನ ಉಪನ್ಯಾಸ ಸ್ಪರ್ಧೆಗಳ **ವಿಷಯಗಳನ್ನು ವೈವಿಧ್ಯತೆ ತರುವ** ಉದ್ದೇಶದಿಂದ ಕೇಂದ್ರ ಕಛೇರಿಯಿಂದ ಕಳುಹಿಸಿಕೊಡುತ್ತಿಲ್ಲ. ಉಪನಿರ್ದೇಶಕರುಗಳು ಪರಿಣಿತರ ಸಹಕಾರದೊಂದಿಗೆ ವಿಷಯಗಳನ್ನು ಆಯ್ಕೆ ಮಾಡಿ ಸ್ಪರ್ಧೆಗಳನ್ನು ನಡೆಸುವುದು.

**ಜಿಲ್ಲಾ ಮಟ್ಟದ ಸಾಂಸ್ಕೃತಿಕ ಪಠ್ಯೇತರ ಚಟುವಟಿಕೆಗಳ ಸ್ಪರ್ಧೆ ನಡೆಸಲು ಆನ್‌ಲೈನ್ ಮೂಲಕ ಬಿಡುಗಡೆಯಾದ ಅನುದಾನದ ಬಳಕೆಗೆ ಸಂಬಂಧಿಸಿದಂತೆ, ಬಳಕೆ ಪ್ರಮಾಣ ಪತ್ರ ಮತ್ತು ಸ್ಪರ್ದೆ ನಡೆಸಿರುವ ಕುರಿತು ತೆಗೆಯಲಾದ 2 ಅಥವಾ 3 ಫೋಟೋಗಳನ್ನು ಕಡ್ಡಾಯವಾಗಿ ಖರ್ಚು ವೆಚ್ಚದ ವಿವರಗಳೊಂದಿಗೆ ದ್ವಿಪ್ರತಿಯಲ್ಲಿ ಜಂಟಿ ನಿರ್ದೇಶಕರು (ಶೈಕ್ಷಣಿಕ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ ಮಲ್ಲೇಶ್ವರಂ, ಬೆಂಗಳೂರು-12. ದಿನಾಂಕ 30.01.2015ರ** ಒಳಗಾಗಿ ಕಳುಹಿಸಿಕೊಡುವುದು. ಜಿಲ್ಲಾ ಮಟ್ಟದ ಸಾಂಸ್ಕೃತಿಕ ಪಠ್ಯೇತರ ಚಟುವಟಿಕೆಗಳ ಸ್ಪರ್ಧೆ ನಡೆಸಲು ಸೂಕ್ತ ಕ್ರಮಗಳನ್ನು ತೆಗೆದುಕೊಂಡು ಸಾಂಸ್ಕೃತಿಕ ಸ್ಪರ್ಧೆಗಳನ್ನು ಯಶಸ್ವಿಯಾಗಿ ನಡೆಸಲು ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ತಿಳಿಸಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿ :

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರು ಮುಂದಿನ ಕ್ರಮಕ್ಕಾಗಿ.
2. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
3. ಕಛೇರಿ ಪ್ರತಿ